# ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.

**ಎಸ್.ಸಿ. ಸಂಖ್ಯೆ 238/2018**

| | | |
|---|---|---|
| ಸಾಕ್ಷಿದಾರರ ಹೆಸರು | : ಅನ್ನಪೂರ್ಣ | ಪಿಡಬ್ಲ್ಯೂ : 6 |
| ತಂದೆಯ / ಗಂಡನ ಹೆಸರು | : ಹೆಚ್ ಎಂ ಗೀರಿಶ್ ಭಟ್ | ಸಿಡಬ್ಲ್ಯೂ : 7 |
| ವಯಸ್ಸು | : 37 ವರ್ಷ | |
| ಉದ್ಯೋಗ | : ಗೃಹಿಣಿ | |
| ವಾಸಸ್ಥಳ | : ಸಿದ್ದಾಪುರ, ಕುಂದಾಪುರ ತಾಲೂಕು , ಉಡುಪಿ ಜಿಲ್ಲೆ | |

**ಸಾಕ್ಷಿಯನ್ನು ಈ ದಿನ ದಿಃ 03.07.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ**

1. ಚಾಸಾ.5 ನನ್ನ ತಮ್ಮ . ಚಾಸಾ.6 ನನ್ನ ತಾಯಿ. ಚಾಸಾ.1 ನನ್ನ ಮೃತ ತಂಗಿ ಆಶಾಳ ಗಂಡ. ನನ್ನ ಮದುವೆಯಾಗಿ 17 ವರ್ಷಗಳಾಗಿದೆ. ನನ್ನ ಮಾವನ ಮೂಲಕ ನನ್ನ ಮದುವೆ ಗಿರೀಶ ಭಟ್ ರೊಂದಿಗೆ ನಡೆಯಿತು. ನಾವಿಬ್ಬರು ಚೆನ್ನಾಗಿದ್ದೆವೆ. ನನಗೆ ಒಬ್ಬಳೇ ಮಗಳು.

2. ಬ್ರೋಕರ್ ಮೂಲಕ ನಮ್ಮ ತಾಯಿಗೆ ಒಂದು ಸಂಬಂದ ಇದೆ ಎಂದು ತಿಳಿದು ಬಂತು. ನಾವು ಚಾಸಾ.1 ರವರ ಮನೆಯನ್ನು ನೋಡಲು ಮೈಸೂರಿಗೆ ಬಂದಾಗ ಅವರು ನಿಶ್ಚಿತಾರ್ಥ ವನ್ನೇ ಮಾಡಿಕೊಂಡು ಬಿಟ್ಟರು. ಚಾಸಾ.1 ಮತ್ತು ಆಶಾಳ ಮದುವೆ ಮೈಸೂರಿನ ಒಂದು ಕಲ್ಯಾಣ ಮಂಟಪ ದಲ್ಲಿ ನಡೆಯಿತು. ಮದುವೆಯಾದ ನಂತರ ನನ್ನ

ತಂಗಿ ಚಾಸಾ.1 ರವರೊಂದಿಗೇ ಮೈಸೂರಿನಲ್ಲೇ ವಾಸ ಮಾಡುತ್ತಿದ್ದಳು. ಅವರಿಬ್ಬರಿಗೆ ಒಂದು ಹೆಣ್ಣು ಮಗು ಮದುವೆಯಾದ 2 ವರ್ಷಕ್ಕೆ ಹುಟ್ಟಿತ್ತು. ಮದುವೆಯಾದ ನಂತರ ಮೊದ ಮೊದಲು ಗಂಡ ಹೆಂಡತಿ ಚೆನ್ನಾಗಿದ್ದರು. ನಂತರ ಒಬ್ಬರ ಮೇಲೆ ಇನ್ನೊಬ್ಬರು ಅನುಮಾನ ಪಡಲು ಪ್ರಾರಂಬಿಸಿದರು. ಈ ಬಗ್ಗೆ ಜಗಳಗಳು, ಮನಸ್ತಾಪಗಳು ಶುರುವಾದವು. ನಂತರ ನಾವುಗಳು ನಮ್ಮ ತಂಗಿಗೆ ಬುದ್ದಿ ಹೇಳಿ ಹೊಂದಿಕೊಂಡು ಹೋಗುವಂತೆ ಹೇಳಿದ್ದೆವು. ಚಾಸಾ.1 ರವರು ಅವರ ವಿಧವೆ ಅಕ್ಕನನ್ನು ಮನೆಗೆ ಕರೆದುಕೊಂಡು ಬಂದು ಇರಿಸಿಕೊಂಡಿದ್ದರು. ಅಕ್ಕನ ಹೇಳಿಕೆಯಂತೆ ನನ್ನ ತಂಗಿ ಆಶಾಳಿಗೆ ಚಾಸಾ.1 ಕಿರುಕುಳ ಕೊಡಲು ಪ್ರಾರಂಬಿಸಿದರು. ಚಾಸಾ.1 ರವರ ಅಕ್ಕನಿಗೆ ಇನ್ನೊಂದು ಮದುವೆಯನ್ನು ಮಾಡಿದರು. ಅವರ ಅಣ್ಣನ ಮದುವೆಯನ್ನು ಸಹ ನಾವೇ ನಿಂತು ಮಾಡಿದ್ದೆವು. ಅವರು ಮಂಗಳೂರಿಗೆ ಹೋಗಿ ನೆಲೆಸಿದರು. ನಂತರ ಚಾಸಾ.1 ನನ್ನ ತಂಗಿಗೆ ಕಿರುಕುಳ ಕೊಡಲು ಪ್ರಾರಂಬಿಸಿದರು. ಚಾಸಾ.1 ರವರ ಪ್ರತಿಯೊಂದು ಮೊಸಗಾರಿಕೆಯನ್ನು ನನ್ನ ತಂಗಿ ವಿರೋದಿಸುತ್ತಿದ್ದಳು. ಆದ್ದರಿಂದ ಚಾಸಾ.1 ರವರಿಗೆ ನನ್ನ ತಂಗಿಯನ್ನು ಕಂಡರೆ ಆಗುತ್ತಿರಲಿಲ್ಲ. ರಾತ್ರಿ 12.00 ಗಂಟೆಯಾದರೂ ಚಾಸಾ.1 ಮನೆಗೆ ಬರುತ್ತಿರಲಿಲ್ಲ. ಬಂದರೂ ಅಕ್ಕನ ಜೊತೆಯಲ್ಲಿ ಪ್ರೂನ್ ನಲ್ಲಿ ಮಾತನಾಡಿಕೊಂಡಿರುತ್ತಿದ್ದ. ಹೀಗಾಗಿ ನನ್ನ ತಂಗಿ ಆಶಾ ಕೂಡ ಎಲ್ಲರೊಂದಿಗೂ ಫೋನ್ ನನಲ್ಲಿ ಮಾತನಾಡಿಕೊಂಡಿರುತ್ತಿದ್ದಳು. ಈ ವಿಷಯಗಳನ್ನೆಲ್ಲಾ ನನ್ನ ತಂಗಿ ನನ್ನ ಆಶಾ ಫೋನ್ ಮಾಡಿದಾಗ ಹೇಳಿಕೊಳ್ಳುತ್ತಿದ್ದಳು.

3. ಈಗ್ಗೆ 5-6 ವರ್ಷಗಳ ಹಿಂದೆ ನಮ್ಮ ದೇವಸ್ತಾನದಲಿಲ ಪೂಜೆ ನಡೆಯುತ್ತಿತ್ತ . ನಾನು ಅಲ್ಲೇ ಇದ್ದೆ. ಆಗ ನನ್ನ ತಮ್ಮ ಫೋನ್ ಮಾಡಿ , ಆಶಾ ಗೆ ಹುಷರಿಲ್ಲ ವಂತೆ ಆಸ್ವತ್ರೆಗೆ ಸೇರಿಸಿದ್ದಾರಂತೆ ಎಂದು ಹೇಳಿದ. ಆಗ ನಾನು ಚಾಸಾ.1 ರವರಿಗೆ ಫೋನ್ ಮಾಡಿದೆ.

ರಾತ್ರಿಯಿಂದ ಹೊಟ್ಟೆ ನೋವು ಎನ್ನುತ್ತಿದ್ದಾಳೆ , ಆದ್ದರಿಂದ ಆಸ್ಪತ್ರೆಗೆ ಸೇರಿಸಿದ್ದೆವೆ ಎಂದನು. ಆಗ ನಾನು ಆತನಿಗೆ , ನಾನು ಅವಳ ಹತ್ತಿರ ಮಾತನಾಡಬೇಕು ಪೋನ್ ಕೊಡು ಎಂದೆ. ಆದರೆ ಆತ ಆಕೆಯೊಂದಿಗೆ ಮಾತನಾಡಲು ಪೋನ್ ನ್ನು ಕೊಡಲಿಲ್ಲ. ಸುಮ್ಮನೆ ಹಿಡಿದುಕೊಡಂಡಿದ್ದ .ವಿಡಿಯೋ ಕಾಲ್ ಮಾಡಿದೆ, ಆತ ರೀಸಿವ್ ಮಾಡಲಿಲ್ಲ. ಆಗ ಕೂಡಲೇ ನಾನು ಮೈಸೂರಿಗೆ ಹೊರಟೆ. ಹುಲಿಕಲ್ ಘಾಟಿ ಯಲ್ಲಿದ್ದಾಗ ಚಾಸಾ.1 ರವರ ಸಂಬಂಧಕ ನಂದನ್ ಎನ್ನುವವನು ಪೋನ್ ಮಾಡಿ ಆಶಾ ತಿಲರಿಕೊಂಡಿದ್ದಾಳೆ ಎಂದು ತಿಳಿಸಿದ. ಆಗ ನಾನು ಆತನಲಿಲ ವಿಚಾರಿಸಿದೆ. ಆಗ ಆತ , ಹೊಟೆ ನೋವು ಎನ್ನುತ್ತಿದ್ದಳಂತೆ, **Scanning** ಗೆ ಕರೆದುಕೊಂಡು ಹೋಗುವ ಮುಂಚೆಯೇ ಮೃತ ಪಟ್ಟಿರುತ್ತಾಳೆ ಎಂದು ಹೇಳಿದ.  ನಂತರ ನಾನು ಚಾಸಾ.1 ಮತ್ತು ಆಶಾ ರವರ ಪಾಮಿಲಿ ಡಾಕ್ಟರ್ ಆಗಿದ್ದಂತಹ ವಿಜಯಕುಮಾರ್ ರವರಿಗೆ ಪೋನ್ ಮಾಡಿ ವಿಷಯ ತಿಳಿಸಿದೆ. ಅವರು ಆಸ್ಪತ್ರೆಗೆ ಹೋಗಿ , ನೋಡಿ  ನಂತರ ನನಗೆ ಪೋನ್ ಮಾಡಿ ಆಶಾ ತೀರಿಕೊಂಡಿದ್ದಾಳೆ ಎಂದು ತಿಳಿಸಿದರು. ನಂತರ ನಾವುಗಳು ಮೈಸೂರನ್ನು ತಲುಪದೆವು. ಆಗ ರಾತ್ರಿ 08.00 ಗಂಟೆಯಾಗಿತ್ತು. ನಾವು ನೇರವಾಗಿ ವಿದ್ಯಾರಣ್ಯ ಆಸ್ಪತ್ರೆಗೆ ಹೋದೆವು. ಅಲ್ಲಿ ಯಾರು ಇರಲಿಲ್ಲ, ಶವ ಸಹ ಇರಲಿಲ್ಲ. ಚಾಸಾ.1 ರವರ ಸಂಬಂಧಿಕರು ನಮ್ಮನ್ನು ಇನ್ನೊಂದು ಆಸ್ಪತ್ರೆಗೆ ಕರೆದುಕೊಂಡು ಹೋದರು. ಅಲ್ಲಿ ಚಾಸಾ.1 ಮತ್ತು ಅವರ ಕುಟುಂಬದವರು ಯಾರು ಇರಲಿಲ್ಲ. ಅಲ್ಲಿದ್ದ ಒಂದು ಶೆಡ್ ನಲ್ಲಿ , ಐಸ್ ಬಾಕ್ಸ್ ನಲ್ಲಿ ಶವವನ್ನು ಇರಿಸಿದ್ದರು. ಅದನ್ನು ನಾವು ನೊಡಿದೆವು. ಅರ್ಧ ಗಂಟೆಯ ನಂತರ ಚಾಸಾ.1 ಅಲ್ಲಿಗೆ ಬಂದರು.

4. ನಾವು ಅವರನ್ನು ವಿಚಾರಿಸಿದಾಗ ಆತ ಡ್ರಾಮಾ ಮಾಡಲು ಶುರು ಮಾಡಿದ. ಹೊಟ್ಟೆ ನೋವು ಎನ್ನುತ್ತಿದ್ದಳು ಎಂದ. ನಂತರ ನನಗೇನು ಗೊತ್ತಿಲ್ಲ  ಎನ್ನುತ್ತಿದ್ದ.  ನಂತರ ಆತ

ಮತ್ತು ಆತನ ಕುಟುಂಬದವರು ಪೋಸ್ಟ್‌ಮಾಟಂ ಮಾಡುವುದು ಬೇಡ , ಮುತ್ತೈದೆಯಾಗಿ ಸತ್ತಿದ್ದಾಳೆ , ದೇಹವನ್ನು ಕುಯ್ಯುವುದು ಬೇಡ , ಅವಳಿಗೆ ಒಳ್ಳೆಯದಾಗಲಿ ಎಂದು ಹೇಳುತ್ತಾ ನಮ್ಮಗಳ ಬ್ರೈನ್ ವಾಷ್ ಮಾಡಿದರು. ಚಾಸಾ.1 ಆ ದಿನ ರಾತ್ರಿ ನಮ್ಮನ್ನು ಆತನ ಸೆಹಹೀತ ಕಿರಣ್ ಎನ್ನುವವರ ಮನೆಯಲ್ಲಿ ಉಳಿದುಕೊಳ್ಳಲು ಬಿಟ್ಟಿದ್ದನು. ನನ್ನ ತಮ್ಮ ರಾತ್ರಿಯಿಡಿ ಶವವದೊಂದಿಗೆ ಒಬ್ಬನೇ ಇದ್ದ. ಮರುದಿನ ಬೆಳಿಗ್ಗೆ 08.00 ಗಂಟೆಗೆ ಶವವನ್ನು ಸ್ಮಶಾನದಲ್ಲಿ ಸುಟ್ಟರು. ಶವವನ್ನು ಮನೆಗೆ ತರಲಿಲ್ಲ . ಯಾವುದೇ ಶಾಸ್ತ್ರ ಸಂಪ್ರದಾಯ ಮಾಡಲಿಲ್ಲ. ಹಾಗೆಯೇ ಸುಟ್ಟರು.

5. ನಂತರ ಮಗು ನನಗೆ ಅಪ್ಪ ಬೇಡ , ನಾನು ಅಮ್ಮನ್ನೊಂದಿಗೆ ಹೋಗುತ್ತೇನೆ ಎಂದು ಹಟ ಮಾಡಿದಳು. ಆಗ ನಾವು ಆಕೆಯನ್ನು ಕರೆದುಕೊಂಡು ಹೋದೆವು. ನಾವು ಊರಿಗೆ ವಾಪಾಸ್ಸಾಗಿ , ಕುಳಿತುಕೊಂಡು ನನ್ನ ತಂಗಿಯ ಸಾವಿನ ಬಗ್ಗೆ ಯೋಚನೆ ಮಾಡಿದಾಗ , ಚಾಸಾ.1 ಏನೋ ಮಾಡಿರುತ್ತಾನೆ ಎಂದು ಅನುಮಾನ ಶುರುವಾಯಿತು. ಆಗ ನಾನು ಚಾಸಾ.1 ರವರಿಗೆ ಪೋನ್ ಮಾಡಿ , ಏನು ಮಾಡಿದೆ ನೀನು ಹೇಳು ಎಂದು ಕೇಳಿದೆ. ಅದರ ಮರುದಿನವೇ , ಆಶಾ ಡೆತ್ ನೋಟ್ ಸಿಕ್ಕಿರುತ್ತದೆ ಎಂದು ಹೇಳಿ ಪೋಲೀಸ್ ಠಾಣೆಗೆ ದೂರನ್ನು ಕೊಟ್ಟ. ನಮ್ಮನ್ನು ಸಹ ಕರೆದ. ಆದರೆ ನಾನು , ನಿನ್ನ ಮೇಲೆ ಅನುಮಾನವಿದೆ , ನಾವು ಬರುವುದಿಲ್ಲ, ನಾವೇ ದೂರನ್ನು ಕೊಡುತ್ತೇವೆ ಎಂದೆ.

6. ನಂತರ 11 ನೇ ದಿನದ ಕಲಾರ್ಯಕೆಕ ಮೈಸೂರಿಗೆ ಬಂದೆವು. ಬಂದು ಪೊಲೀಸ್ ಠಾಣೆಗೆ ಹೋದವು. ನಾವು ದೂರನ್ನು ಕೊಡಲು ಹೋದಾಗ ಆ ದೂರನ್ನು ಅವರು ಪಡೆಯಲಿಲ್ಲ. ಚಾಸಾ.1 ದೂರನ್ನು ಕೊಟ್ಟಿದ್ದಾನೆ, ತಪ್ಪು ಮಾಡಿದ್ದರೆ ಆತನೇ ಸಿಕ್ಕಿ

ಹಾಕಿಕೊಳ್ಳುತ್ತಾನೆ , ನೀವು ದೂರನ್ನು ಕೊಡುವುದು ಬೇಡ ಪೊಲೀಸರು ಹೇಳಿದರು. ನಂತರ ನಾವು ಕಾರ್ಯಕ್ಕೆ ಹೋದೆವು.

7. 13 ನೇ ದಿನದ ಕಾರ್ಯವನ್ನು ಮುಗಿಸಿ ಊರಿಗೆ ವಾಪಾಸ್ ಹೋಗುವ ಸಂದರ್ಬದಲ್ಲಿ ಚಾಸಾ.1 ಪೋಲಿಸ್ ಠಾಣೆಗೆ ಬರಲು ಹೇಳಿದರು. ಹೀಗಾಗಿ ನಾವು ಪೊಲೀಸ್ ಠಾಣೆಗೆ ಹೋದೆವು. ಅಲ್ಲಿ ಪೊಲೀಸರು, ಮಗುವನ್ನು ಅಪ್ಪನೇ ನೋಡಿಕೊಳ್ಳಬೇಕು ನೀವು ಮಗುವನ್ನು ಆತನಿಗೆ ಕೊಡಿ ಎಂದು ನಮ್ಮ ಮೇಲೆ ಗಲಾಟೆ ಮಾಡಿದರು. ನಂತರ ಮಗುವನ್ನು ಠಾಣೆಯಲ್ಲಿ ಆತನಿಗೆ ಕೊಟ್ಟೆವು.

8. ಪೊಲೀಸರು ನನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ .

9. ಚಾಸಾ.1 ಡೆತ್ ನೋಟ್ ನ್ನು ನಮಗೆ ತೋರಿಸಲಿಲ್ಲ. ಅದರಲ್ಲಿ ಏನನ್ನು ಬರೆದಿದ್ದಳು ಎನ್ನುವುದು ನನಗೆ ಗೊತ್ತಿಲ್ಲ. ಗಣೇಶ್ ಭಟ್ ಎನ್ನುವವನು ಮೆಸೇಜ್ ಮಾಡುತ್ತಿದ್ದ. ಆದ್ದರಿಂದ ಆತನ ವಿರುದ್ಧ ದೂರನ್ನು ಕೊಟ್ಟಿರುತ್ತೇನೆ ಎಂದು ಚಾಸಾ.1 ಹೇಳಿದ.

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ ಪಾಟಿ ಸವಾಲಿಗೆ ಸಮಯ ಕೋರಿದ್ದರಿಂದ , ಸಮಯ ನೀಡಲಾಯಿತು.</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸ ಇ ಎ ಒ**

**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು
ಮೈಸೂರು.**